# KARNATAKA LOKAYUKTA

No.Compt/LOK/BD-3276/2017/ARE-6 M.S. Building,
Dr. B.R. Ambedkar Veedhi,
Bengaluru, Dated: 14.05.2020.

## REPORT UNDER SECTION 12 (3) OF THE KARNATAKA LOKAYUKTA ACT, 1984

Sub: Proceedings against :1) The Managing Director, Karnataka Neeravari Nigama Limited, Coffee Board Building, Dr.B.R.Ambedkar Veedhi, Bengaluru, 2) The Managing Director, KRID Limited (Land Army), Grameenabhivruddi Bhavan, Ananda Rao Circle, Bengaluru, 3) The Chief Engineer (Sri Cheluvaraju and Sri M.G.Shivashankar), Karnataka Neeravari Nigam Limited, Upper Bhadra, Chitradurga District, 4) Sri Rajanna, Executive Engineer, KRID Limited (Land Army), Challakere Division, Challakere Taluk, Chitradurga District 5) Sri Shashikumar, Assistant Executive Engineer, KRID Limited (Land Army), Challakere Division Challakere Taluk, Chitradurga District, 6) Sri Umesh, Assistant Engineer, KRID Limited (Land Army), Challakere Division, Challakere Taluk, Chitradurga District & 7) Sri N.Y.Gopalkrishna, MLA, Ballari Rural Constituency, Gandhi Nagar Main Road, Ballari - about their misconduct as Public/ Government servants – reg.

----------

One Sri. H.T. Nagareddy S/o Hosakote Thimmappa, J.B. Halli Post, Molakalmuru Taluk, Chitradurga District, has filed this complaint against (1) The Managing Director, Karnataka Neeravari Nigama Limited, Coffee Board Building,

Dr.B.R.Ambedkar Veedhi, Bengaluru, (2) The Managing Director, KRID Limited (Land Army), Grameenabhivruddi Bhavan, Ananda Rao Circle, Bengaluru, (3) The Chief Engineer (Sri Cheluvaraju and Sri M.G.Shivashankar), Karnataka Neeravari Nigam Limited, Upper Bhadra, Chitradurga District, (4) Sri Rajanna, Executive Engineer, KRID Limited (Land Army), Challakere Division, Challakere Taluk, Chitradurga Dist. (5) Sri Shashikumar, Asst. Executive Engineer, KRID Limited (Land Army), Challakere Division Challakere Taluk, Chitradurga District, (6) Sri Umesh, Asst. Engineer, KRID Limited (Land Army), Challakere Division, Challakere Taluk, Chitradurga District and also against (7) Sri N.Y.Gopalakrishna, MLA of Ballari Rural Constituency ('**Respondents no. 1 to 7**' for short) stating that a sum of Rs.2.00 crores was sanctioned under the State SCP Scheme for the purpose of formation/construction of 5 K.M. tar road from Gourasamudra SC Colony to Chikkanahalli SC Colony and the said work was entrusted to Karnataka Rural Infrastructure Development Limited (for short **KRIDL**). Accordingly, the authorities of KRIDL, Challakere Division took

up the work by preparing the estimate and other relevant documents. He has alleged that while carrying out the work, the KRIDL, at the behest of MLA Sri.N.Y.Gopalakrishna, has involved in the corruption and the work has not been carried out as per the action plan and the work was carried out with inferior quality and thereby misappropriated the public funds.

2) On receipt of the complaint, an investigation under Section 9 of the Karnataka Lokayukta Act, 1984, was taken up and the Respondents 1 to 6 were directed to submit their comments. In the mean while, Superintendent of Police, Karnataka Lokayukta, Chitradurga, was directed to investigate the matter and to submit the report.

3) The Respondents No.3 to 6 have submitted their comments stating that, the work relating to formation of road as stated by the complainant was entrusted to KRIDL and they have executed the work from January 2017 to June 2017. Since, there was a heavy rain in Molakalmuru Taluk during the month of September and October 2017, the road was damaged

here and there. However, as per the terms of the agreement, the KRIDL was required to maintain the road for a period of one year from the date of handing over the road to the concerned Panchayath and when they tried to take up the repair works of the road, the complainant had objected on account of pendency of his complaint before this authority. Therefore, they could not take up the repair works and there was no lapse on their part in formation of road in question as alleged by the complainant. Accordingly, they prayed to reject the complaint.

4) On 13.07.2018, the Superintendent of Police, Karnataka Lokayukta, Chitradurga submitted the investigation report. It is useful to extract the same, which reads here as under:-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯರವರಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಶ್ರೀ.ಹೆಚ್.ಟಿ.ನಾಗರೆಡ್ಡಿ ತಂದೆ ಹೊಸಕೋಟೆ ತಿಮಪ್ಪ, ಜೆ.ಬಿ.ಹಳ್ಳಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಶ್ರೀ.ಎನ್.ವೈ.ಗೋಪಾಲಕೃಷ್ಣ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕರು ಮತ್ತು ಇತರೆ 6 ಜನರ ವಿರುದ್ಧ ಕೇಂದ್ರ ಕಛೇರಿಗೆ ನಮೂನೆ-1&2 ರ ರೀತ್ಯಾ ಸಲ್ಲಿಸಿರುವ ದೂರು ಅರ್ಜಿಯನ್ನು ವಿಚಾರಣೆ ಕೈಗೊಂಡು ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ಮಾನ್ಯರು ಉಲ್ಲೇಖದ ಜ್ಞಾಪನ ಪತ್ರದನ್ವಯ ಈ ಕಛೇರಿಗೆ ಕಳುಹಿಸಿಕೊಟ್ಟಿದ್ದು, ಅದನ್ನು ವಿಚಾರಣೆಗಾಗಿ ಈ ಕಛೇರಿ ಮುಖಾಂತರ ಶ್ರೀ.ಎನ್.ಎನ್.ಕೇಶವಮೂರ್ತಿ, ಪೊಲೀಸ್ ನಿರೀಕ್ಷಕರು, ಕ.ಲೋ., ಚಿತ್ರದುರ್ಗ ಇವರಿಗೆ ನೀಡಲಾಗಿದ್ದು ಇರುತ್ತದೆ. ಅದರಂತೆ ಸದರಿ ಅಧಿಕಾರಿಯವರು ದೂರು

ಅರ್ಜಿಯನ್ನು ವಿಚಾರಣೆ ಕೈಗೊಂಡು ವಿವರವಾದ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ ವಿವರಗಳು ಈ ಕೆಳಗಿನಂತಿರುತ್ತದೆ.

| | | |
|---|---|---|
| 1 | **ದೂರುದಾರರ ವಿವರ** | ಶ್ರೀ.ಹೆಚ್.ಟಿ.ನಾಗರೆಡ್ಡಿ ತಂದೆ ಹೊಸಕೋಟಿ ತಿಮಪ್ಪ, ಜೆ.ಬಿ.ಹಳ್ಳಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| 2 | **ದೂರಿನ ಸಂಖ್ಯೆ** | ಸಂಖ್ಯೆ: ಕಂಪ್ಲೇಂಟ್/ಲೋಕ್/ಬಿಡಿ/3276/2017/ಎಆರ್‌ಇ–5, ದಿ: 25/11/2017. |
| 3 | **ಎದುರುದಾರರ ವಿವರ** | 1] ಶ್ರೀ.ಎಸ್.ವೈ.ಗೋಪಾಲಕೃಷ್ಣ, ಶಾಸಕರು, ಬಳ್ಳಾರಿ ಗ್ರಾಮೀಣ ಕ್ಷೇತ್ರ.<br>2] ವ್ಯವಸ್ಥಾಪಕ ನಿರ್ದೇಶಕರು, ಕ.ನಿ.ನಿ.ನಿಯಮಿತ, ಬೆಂಗಳೂರು.<br>3] ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.<br>4] ಮುಖ್ಯ ಇಂಜಿನಿಯರ್, ಕೆ.ನಿ.ನಿ.ನಿ. ಭದ್ರಾ ಮೇಲ್ದಂಡೆ, ಚಿತ್ರದುರ್ಗ.<br>5] ಶ್ರೀ.ರಾಜಣ್ಣ, ಇಕ್ಸಿಕ್ಯೂಟಿವ್ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ ವಿಭಾಗ, ಚಳ್ಳಕೆರೆ.<br>6] ಶ್ರೀ.ಶಶಿಕುಮಾರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಚಳ್ಳಕೆರೆ ವಿಭಾಗ, ಚಳ್ಳಕೆರೆ.<br>7] ಶ್ರೀ.ಉಮೇಶ್, ಜ್ಯೂನಿಯರ್ ಇಂಜಿನಿಯರ್, ಚಳ್ಳಕೆರೆ ವಿಭಾಗ, ಚಳ್ಳಕೆರೆ. |
| 4 | **ದೂರಿನಲ್ಲಿ ಆಪಾದಿಸಲಾದ ಅಂಶಗಳು** | |
| | ಮೊಳಕಾಲ್ಮೂರು ತಾಲ್ಲೂಕ್, ಗೌರಸಮುದ್ರ ಗ್ರಾಮದ ಎಸ್.ಸಿ. ಕಾಲೋನಿಯಿಂದ ಚಿಕ್ಕನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿವರೆಗೆ 5 ಕಿ.ಮೀ. ಡಾಂಬಾರೀಕರಣ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರಾಜ್ಯ ಎಸ್.ಸಿ.ಪಿ. ಯೋಜನೆ ಯಡಿಯಲ್ಲಿ ಸಾರ್ವಜನಿಕರಿಗೆ ರಸ್ತೆ ಅನುಕೂಲವಾಗಲೆಂದು ರೂ.2.00 ಕೋಟಿಗಳಿಗೆ ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ತೀರ್ಮಾನಿಸಿದ್ದ ಮೇರೆಗೆ ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕರಾದ ಎನ್.ವೈ.ಗೋಪಾಲಕೃಷ್ಣ ಇವರು ಹಸ್ತ ಕ್ಷೇಪ ನಡೆಸಿ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕೆ.ಆರ್.ಐ.ಡಿ.ಎಲ್. (ಲ್ಯಾಂಡ್ ಆರ್ಮಿ) ಇವರಿಗೆ ವಹಿಸಿಕೊಡುವಂತೆ ಪತ್ರ ಬರೆದು ಶಿಫಾರಸ್ಸು ಮಾಡಿ ಅನುಷ್ಠಾನಗೊಳಿಸಲು ಕೆ.ಆರ್.ಐ.ಡಿ.ಎಲ್ ರವರಿಗೆ ಅನುಮೋದನೆ ನೀಡಿ ಹಣ ಮಂಜೂರು ಮಾಡಿರುತ್ತಾರೆ. ಅದರಂತೆ ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ ವಿಭಾಗದವರು ಸದರಿ ರಸ್ತೆ ಅಭಿವೃದ್ಧಿ ಪಡಿಸಿ ಡಾಂಬಾರೀಕರಣ ಗೊಳಿಸಲು ಎರಡು ಕೋಟಿಗಳಿಗೆ ಎಸ್ಟಿಮೇಟ್ ತಯಾರಿಸಿ ದಿನಾಂಕ:01/12/2016 ರಂದು ಮುಖ್ಯ ಇಂಜಿನಿಯರ್ ಭದ್ರ ಮೇಲ್ದಂಡೆ ಕ.ನಿ.ನಿ.ನಿ. ಚಿತ್ರದುರ್ಗ ಇವರಿಂದ ಆಡಳಿತಾತ್ಮಕ ಮಂಜೂರಾತಿ ಪಡೆದು ಸದರಿ ಕಾಮಗಾರಿಯನ್ನು 2017 ಆಗಸ್ಟ್ ತಿಂಗಳಿನಲ್ಲಿ ಪೂರ್ಣಗೊಳಿಸಿರುತ್ತಾರೆ. ಆದರೆ ಕೆ.ಆರ್.ಐ.ಡಿ. ಲಿಮಿಟೆಡ್, ಚಳ್ಳಕೆರೆ ಇವರು ಎಸ್ಟಿಮೇಟ್‌ನಂತೆ ಸದರಿ ರಸ್ತೆ ಅಭಿವೃದ್ಧಿ ಪಡಿಸದೇ ಸಂಪೂರ್ಣ ಕಳಪೆ ಕಾಮಗಾರಿ ಮಾಡಿದ್ದು, ಕೇವಲ ಎರಡುವರೆ ತಿಂಗಳಿನಲ್ಲಿ ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಯು ಫೋಟೋಗಳಲ್ಲಿ ತೋರಿಸಿರುವಂತೆ ಹಾಳಾಗಿರುತ್ತದೆ.<br>ಮೊಳಕಾಲ್ಮೂರು ಕ್ಷೇತ್ರದಲ್ಲಿ ಎಸ್.ತಿಪ್ಪೇಸ್ವಾಮಿಯವರು, ಶಾಸಕರಾಗಿದ್ದರೂ ಸಹ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕರಾದ ಎನ್.ವೈ.ಗೋಪಾಲಕೃಷ್ಣ ಇವರು ಹಸ್ತ ಕ್ಷೇಪ ನಡೆಸಿ ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು | |

| | |
|---|---|
| | ಕೆ.ಆರ್.ಐ.ಡಿ.ಎಲ್. ಚಳ್ಳಕೆರೆಯವರ ಮೂಲಕ ಅನುಷ್ಠಾನಗೊಳಿಸಲು, ವ್ಯವಸ್ಥಾಪಕ ನಿರ್ದೇಶಕರು, ಕೆ.ಎನ್.ಎನ್. ನಿಯಮಿತ, ಬೆಂಗಳೂರು ರವರಿಗೆ ಕೋರಿಕೊಂಡಿರುವುದು, ಸದರಿ ಕಳಪೆ ರಸ್ತೆ ಅಭಿವೃದ್ದಿ ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿರುವುದು ಮೇಲ್ನೋಟಕ್ಕೆ ಸಾಭೀತಾಗುತ್ತಿದೆ. ಇದರಿಂದ ಸರ್ಕಾರ ಮಹತ್ವಕಾಕ್ಷಿ ಯೋಜನೆಯಾದ ಪರಿಶಿಷ್ಠ ಜಾತಿ ಅಭಿವೃದ್ಧಿಯ ಸಲುವಾಗಿ (ಎಸ್.ಸಿ.ಪಿ. ಯೋಜನೆ) ರೂ.2.00 ಕೋಟಿಯ ಅನುದಾನದಲ್ಲಿ ಗೌರಸಮುದ್ರ ಎಸ್. ಕಾಲೋನಿಯಿಂದ ಚಿಕ್ಕನಹಳ್ಳಿ ಎಸ್.ಸಿ. ಕಾಲೋನಿವರೆಗಿನ ರಸ್ತೆ ಅಭಿವೃದ್ದಿ ಡಾಂಬರೀಕರಣ ಕಾಮಗಾರಿಯು ಸಂಪೂರ್ಣ ಕಳಪೆಯಾಗಿ ಭ್ರಷ್ಟಾಚಾರವಾಗಿರುತ್ತದೆ.<br><br>ಇದರಿಂದ ಸರ್ಕಾರದ ಪರಿಶಿಷ್ಟ ಜಾತಿ ಅಭಿವೃದ್ಧಿ ಯೋಜನೆಯ ಮೀಸಲಾತಿ ಹಣದಲ್ಲಿ ರೂ.2.00 ಕೋಟಿ ನಷ್ಟವಾಗಿ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ. ಆದ್ದರಿಂದ ಕೆ.ಆರ್.ಐ.ಡಿ. ಲಿಮಿಟೆಡ್ ಚಳ್ಳಕೆರೆ ವಿಭಾಗದವರು ಸದರಿ ರಸ್ತೆಯ ಅಭಿವೃದ್ದಿ ಕಾಮಗಾರಿಯಲ್ಲಿ ನಡೆಸಿರುವ ಭ್ರಷ್ಟಾಚಾರಕ್ಕೆ ಸಹಕರಿಸಿರುವ ಅಧಿಕಾರಿಗಳ ವಿರುದ್ದ ಸರ್ಕಾರಿ ಹಣ ದುರುಪಯೋಗ, ಕಳಪೆ ಕಾಮಗಾರಿ ಮತ್ತು ಕರ್ತವ್ಯ ಲೋಪದಡಿ ಮತ್ತು ನಿರ್ಲಕ್ಷತೆ ಅಡಿ ಕಾನೂನು ರೀತಿಯಲ್ಲಿ ಮೊಕದ್ದಮೆ ದಾಖಲು ಮಾಡಿಕೊಂಡು ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಿರುತ್ತದೆ. |
| 5 | **ವಿಚಾರಣೆಯಿಂದ ಹೊರಪಟ್ಟ ಅಂಶಗಳು** |
| | ಮೇಲ್ಕಂಡ ಅರ್ಜಿ ವಿಚಾರಣೆ ಸಂಬಂಧ ವಿಚಾರಣಾಧಿಕಾರಿಯವರು ಖುದ್ದಾಗಿ ಸ್ಥಳ ಪರಿಶೀಲನೆ ಕೈಗೊಂಡು, ನಂತರ ವಿಚಾರಣಾಧಿಕಾರಿಯವರು ಡಾಂಬರ್ ರಸ್ತೆ ಪರಿಶೀಲನೆ ಮಾಡಿ ರಸ್ತೆ ಗುಣಮಟ್ಟ & ಬಾಳಿಕೆ ಹಾಗೂ ತಗಲಬಹುದಾದ ವೆಚ್ಚದ ಬಗ್ಗೆ ನಿಖರವಾಗಿ ವರದಿ & ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಎ.ಇ.ಇ., ಗುಣ & ಭರವಸೆ ಉಪ–ವಿಭಾಗ, ಚಿತ್ರದುರ್ಗ ಇವರಿಗೆ ಮತ್ತು ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಕೋರಿ ಹಾಗೂ ಡಾಂಬರ್‌ರಸ್ತೆಯನ್ನು ಎಸ್ಟಿಮೇಷನ್ ಪ್ರಕಾರ ಕಾಮಗಾರಿ ಮಾಡಿದ್ದಾರೆಯೇ? ಎಂಬ ಬಗ್ಗೆ ಪರಿಶೀಲನೆ ಮಾಡಿ & ರಸ್ತೆ ಗುಣಮಟ್ಟದ ಬಗ್ಗೆ ನಿಖರವಾದ ಹಾಗೂ ಸ್ಪಷ್ಟವಾದ ವರದಿಯನ್ನು ನೀಡಲು ಕೋರಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ ಇವರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್., ಗ್ರಾಮೀಣಾಭಿವೃದ್ದಿ ಭವನ, 04ನೇ & 05 ನೇ ಮಹಡಿ, ಆನಂದರಾವ್ ವೃತ್ತ, ಗಾಂಧಿನಗರ, ಬೆಂಗಳೂರು ಇ.ಇ., ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಚಳ್ಳಕೆರೆ ಇವರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರುಗಳಿಗೂ ಸಹ ಪತ್ರ ಬರೆದು ಅರ್ಜಿಯಲ್ಲಿನ ವಿಷಯಕ್ಕೆ ಸ್ಪಷ್ಟತೆ ಕೋರಿ ಮಾಹಿತಿ ಹಾಗೂ ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸಿ ವರದಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.<br><br>**"ಸದರಿ ರಸ್ತೆಯನ್ನು 4.313 ಕಿ.ಮೀ ಉದ್ದ ನಿರ್ಮೀಸಲಾಗಿದ್ದು, ನಿರ್ಮಾಣಗೊಂಡ ಡಾಂಬರ್ ರಸ್ತೆಯನ್ನು ಪರಿಶೀಲಿಸಲಾಗಿ ಕೆಲವು ಭಾಗದಲ್ಲಿ ಬೇಸ್ ಪದರ ಕುಸಿತವಾಗಿದ್ದು, ಇನ್ನೂ ಕೇಲವು ಭಾಗದಲ್ಲಿ ಸಬ್‌ಗ್ರೇಡ್ ಪದರ ಕುಸಿತಕ್ಕೊಳಗಾಗಿರುತ್ತದೆ. ಡಾಂಬರ್ ಪದರದ ಅಸಮರ್ಪಕ ಗಟ್ಟಿಣೆಯಿಂದಾಗಿ, ಮಳೆ ನೀರು ಬೇಸ್ ಪದರಕ್ಕೆ ಇಳಿದು ಬೇಸ್ ಪದರದ ಕುಸಿತಕ್ಕೆ ಕಾರಣವಾಗಿರುತ್ತದೆ. ಸಬ್ ಗ್ರೇಡ್ ಬಲವರ್ಧನೆಗಾಗಿ ಉಪಯೋಗಿಸಲಾದ ಗ್ರಾವೆಲ್ ಉಬ್ಬುವ ಗುಣ ಹೊಂದಿರುವುದು ಸಹ ರಸ್ತೆಯ ವಿಫಲತೆಗೆ ಪ್ರಮುಖ ಕಾರಣವಾಗಿರುತ್ತದೆ. ಅಂದಾಜಿನಲ್ಲಿ ಕನಿಷ್ಠ 0.9 ಮೀಟರ್ ಅಗಲದ ಭುಜಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಂಡಿದ್ದರೂ, ಬಹುತೇಕ ಕಡೆಗಳಲ್ಲಿ ಸದೃಡವಾದ ಭುಜಗಳ ನಿರ್ಮಾಣವಾಗಿರುವುದಿಲ್ಲ. ರಸ್ತೆಯ ವಿಫಲತೆಗೆ ಇದು ಒಂದು ಕಾರಣವಾಗಿರುತ್ತದೆ"**ಎಂಬುದಾಗಿ ತಿಳಿದು ಬಂದಿರುತ್ತದೆ.<br><br>ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿಡಬ್ಲ್ಯೂಡಿ ಮೊಳಕಾಲ್ಮೂರು ರವರು ತಮ್ಮ ಪತ್ರ |

| | |
|---|---|
| | ಸಂಖ್ಯೆ:ಸಂ;ಸಕಾಇಂ/ಲೋಇ/ಉ.ವಿ/ಮೊ/ವ/2017–18 ದಿನಾಂಕ:29.01.2018 ರಲ್ಲಿ ಮೇಲ್ಕಂಡ ಕಾಮಗಾರಿಯ ಬಗ್ಗೆ ವರದಿಯನ್ನು ನೀಡಿದ್ದು, ಸ್ವೀಕರಿಸಿಕೊಂಡು ಪರಿಶೀಲಿಸಲಾಗಿ..., **"ಮೇಲ್ಕಂಡ ಕಾಮಗಾರಿಯ ಒಟ್ಟು ಉದ್ದ 3876 ಮೀ ಇದ್ದು, ವಾಸ್ತವಿಕವಾಗಿ ಬೇಸ್ ಪದರಕ್ಕಾಗಿ ಅಂದಾಜು ಪಟ್ಟಿಯಲ್ಲಿರುವ ವೆಟ್ ಮಿಕ್ಸ್ ಮ್ಯಕ್ಯಾಡಂ (ಡಬ್ಲೂಎಂಎಂ) ಅಂಶದ ಬದಲು WATER Boumd Macadom ಅನ್ನು ಉಪಯೋಗಿಸಲಾಗಿದ್ದು, ಸದರಿ ಒಟ್ಟು ಮೂರು ಪದರಗಳ ದಪ್ಪ 0.225 ಮೀ ಗಳ ಬದಲು 0.12 ನಿಂದ 0.15 ಮೀ ಗಳಿರುತ್ತದೆ. ಸದರಿ ಗ್ರೇಡ್–2 ಮತ್ತು ಗ್ರೇಡ್–3 ಗಳು ಸಹ MORTH Table 400-9 ರ ಪ್ರಕಾರ ನಿಗದಿತ ಗ್ರಡೇಷನ್ ಹೊಂದಿರುವುದಿಲ್ಲ. MSS ಪದರ (MORTH Table 500-19) ಅನ್ವಯ ಡಾಂಬರೀಕರಣಕ್ಕಾಗಿ ಅಳವಡಿಸಿರುವ ಎಂ.ಎಸ್.ಎಸ್ ಪದರವು ನಿಗಧಿತ 20ಎಂಎಂ ದಪ್ಪವಿದ್ದು, ಡಾಂಬರ್ ಅಂಶವು 4.30% ರಿಂದ 4.50% ಸಹ ನಿಗಧಿತ ಪ್ರಮಾಣದಲ್ಲಿರುತ್ತದೆ. ನಿಗಧಿತ ಪ್ರಮಾಣದಲ್ಲಿ ಡಾಂಬರ್ ಮೇಲ್ಮೆ ಪದರವನ್ನು ಸಮರ್ಪಕವಾಗಿ ಗಟ್ಟಿಣೆಗೊಳಿಸದಿರುವುದು ಹಾಗೂ ಉಷ್ಣಾಂಶದ ಕೊರತೆಯು ಸಹ ರಸ್ತೆಯು ಬಹುತೇಕ ಕಡೆಗಳಲ್ಲಿ ಕಿತ್ತು ಹೋಗಿರುವುದಕ್ಕೆ ಕಾರಣವಾಗಿರುತ್ತದೆ. ಸದರಿ ರಸ್ತೆಗೆ ಸಬ್ ಗ್ರೇಡ್ ಹಾಗೂ ಭುಜಗಳ ಬಲವರ್ಧನೆಗಾಗಿ ಉಪಯೋಗಿಸಲಾದ ಗ್ರಾವೆಲ್ ಸಹ ರಸ್ತೆಗೆ ಬಳಸಲು ಯೋಗ್ಯವಿರುವುದಿಲ್ಲ. ಬಹುತೇಕ ಕಡೆ ಭುಜಗಳ ಬಲವರ್ಧನೆ ಮಾಡಿರುವುದಿಲ್ಲ. ಹಾಲಿ 3593.00 ಮೀ ಗಳನ್ನು ಡಾಂಬರೀಕರಣವಾಗಿ ರಸ್ತೆ ನಿರ್ಮಿಸಲಾಗಿರುತ್ತದೆ. ಒಟ್ಟಾರೆಯಾಗಿ ಡಾಂಬರೀಕರಣ ರಸ್ತೆಯು ಬಹುತೇಕ ಕಡೆಗಳಲ್ಲಿ ಕಿತ್ತು ಹೋಗಲು ಕಾರಣವಾಗಿರುತ್ತದೆ"** ಎಂಬುದಾಗಿ ತಿಳಿದು ಬಂದಿರುತ್ತದೆ.<br><br>ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂ:ಕನೀನಿ/ಲೋಕಾಯುಕ್ತ/ಇತರೆ/2017/6919 ದಿನಾಂಕ:14.02.2018 ವನ್ನು ಪರಿಶೀಲಿಸಲಾಗಿ,"ಸದರಿ ಮೇಲ್ಕಂಡ ಕಾಮಗಾರಿಯು ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿರುತ್ತದೆ. ಆದರೆ ಸರ್ಕಾರದ ಆದೇಶ ಸಂ: ಜಸಂಇ 35 ವಿಬ್ಯಾಇ 2016, ಬೆಂಗಳೂರು ದಿನಾಂಕ:20.08.2016 ರಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆ ಮತ್ತು ಈ ಯೋಜನೆಗಳಿಗೆ ಸಂಬಂಧಿಸಿದ ಮತ್ತು ಉದ್ದೇಶಿತ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಂಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಕಾಮಗಾರಿಗಳನ್ನು ಹೊಸದಾಗಿ ರಚಿಸಿದ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಕರ್ನಾಟಕ ನೀರಾವರಿ ನಿಗಮದಿಂದ ವರ್ಗಾಯಿಸಲಾಗಿರುತ್ತದೆ. ಹಾಗೂ ವಿಶ್ವೇಶ್ವರಯ್ಯ ಜಲ ನಿಗಮವು ಕಾರ್ಯಾರಂಭವನ್ನು ಸಹ ಮಾಡಿರುತ್ತದೆ. ಅದ್ದರಿಂದ ದೂರಿನ ಕುರಿತಂತೆ ಮಾಹಿತಿಯನ್ನು ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ರವರಿಂದ ಮಾಹಿತಿಯನ್ನು ಪಡೆಯಬಹುದಾಗಿದೆ" ಎಂಬುದಾಗಿ ತಿಳಿದು ಬಂದಿರುತ್ತದೆ.<br><br>ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಬೆಂಗಳೂರು ರವರ ಪತ್ರ ಸಂ:ಕೆಆರ್‌ಐಡಿಎಲ್/ಆಡಳಿತ/ಸಿಆರ್–ಚಳ್ಳಕೆರೆ/ಲೋಕಾಯುಕ್ತ/2017–18/1162 ದಿನಾಂಕ:05.03.2018 ನ್ನು ಪರಿಶೀಲಿಸಲಾಗಿ, **"ಕೆಆರ್‌ಐಡಿಎಲ್ ಸಂಸ್ಥೆಯು ಸರ್ಕಾರದ ವಿವಿಧ ಇಲಾಖೆಗಳು ವಹಿಸಿಕೊಡುವ ಎಲ್ಲಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸರ್ಕಾರದ ಕಂಪನಿಯಾಗಿರುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಕಲಂ (4) (ಜೆ) ರಡಿಯಲ್ಲಿ ಗರಿಷ್ಟ 2.00 ಕೋಟಿಗಳವರೆಗಿನ ಕಾಮಗಾರಿಯನ್ನು ನಿರ್ವಹಿಸಲು ಸರ್ಕಾರದ ಆದೇಶವಿರುತ್ತದೆ ಹಾಗೂ ಸದರಿ ಕಾಯ್ದೆಯಡಿಯಲ್ಲಿ ಬೇರೊಂದು ಇಲಾಖೆಯಿಂದ ಬಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅವಕಾಶವಿರುತ್ತದೆ"** ಎಂಬುದಾಗಿ ತಿಳಿದು ಬಂದಿರುತ್ತದೆ. |

ಕಂಪನಿ ಕಾರ್ಯದರ್ಶಿಗಳು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಬೆಂಗಳೂರು ರವರ ಪತ್ರ ಸಂ:ವಿಜೆಎನೆಲ್/ಎಎಲ್‌ಜಿ–18/2017–18/3111 ದಿನಾಂಕ:15.03.2018 ನ್ನು ಪರಿಶೀಲಿಸಲಾಗಿ, **ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಮುಖ್ಯ ಇಂಜಿನೀಯರ್ ಭದ್ರಾ ಮೇಲ್ದಂಡೆ ಯೋಜನೆ ಚಿತ್ರದುರ್ಗ ರವರು ಈ ಹಿಂದೆ ಕರ್ನಾಟಕ ನೀರಾವರಿ ನಿಗಮದ ಅಡಿಯಲ್ಲಿ ಕಾರ್ಯನಿರ್ವಹಿಸಿದ್ದು, ಈ ಕಾರಣದಿಂದಾಗಿ ಪ್ರಕರಣಕ್ಕೆ ಕುರಿತಂತೆ ಮುಖ್ಯ ಇಂಜಿನೀಯರ್ ಭ.ಮೇ.ಯೋ ಚಿತ್ರದುರ್ಗ, ಹಾಗೂ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ಮಾಹಿತಿಯನ್ನು ಪಡೆಯ ಬಹುದಾಗಿದೆ** ಎಂಬುದಾಗಿ ತಿಳಿಸಿರುತ್ತಾರೆ.

ಮುಖ್ಯ ಇಂಜಿನೀಯರ್ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರ ಮೇಲ್ದಂಡೆ ಯೋಜನಾ ವಲಯ ಚಿತ್ರದುರ್ಗ ರವರು ತಮ್ಮ ಪತ್ರ ಸಂ:ಮು.ಇ.ಚಿ/ವಿ.ಜ.ನಿ.ನಿ/ಭ.ಮೇ.ಯೋ.ವ/ತಾ.ಸ.6/ತಾ.ಶಾ.6/2018–19/634 ದಿನಾಂಕ:21.06.2018 ರಲ್ಲಿ ವರದಿಯನ್ನು ಕಳುಹಿಸಿದ್ದನ್ನು ಸ್ವೀಕರಿಸಿಕೊಂಡು ಪರಿಶೀಲಿಸಲಾಗಿ..., "ಮಾನ್ಯ ಶ್ರೀ ಎನ್.ವೈ.ಗೋಪಾಲಕೃಷ್ಣ, ಶಾಸಕರು, ಬಳ್ಳಾರಿ ಗ್ರಾಮೀಣ ಕ್ಷೇತ್ರ ಇವರ ಮನವಿ ಪತ್ರ ದಿನಾಂಕ:06.06.2016 ರಲ್ಲಿ ವೀರಾಪುರದಿಂದ ಗೌರಸಮುದ್ರ ಮುಖಾಂತರ ಚಿಕ್ಕನಹಳ್ಳಿ ಎಸ್ ಸಿ ಕಾಲೋನಿಯವರೆಗೆ 5.00 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ 2.00 ಕೋಟಿ ಗಳಿಗೆ ಹಾಗೂ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಇವರಿಗೆ ವಹಿಸಿಕೊಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಶಾಸಕರ ಕೋರಿಕೆಯಂತೆ ಸದರಿ ಕಾಮಗಾರಿಯನ್ನು ಎನ್.ಸಿ.ಪಿ ಯೋಜನೆಯಡಿಯಲ್ಲಿ ಕೆ.ಆರ್.ಐ.ಡಿ.ಎಲ್ ರವರಿಂದ ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ಕ.ನೀ.ನಿ/ತಾಂತ್ರಿಕ/ಎಸ್.ಸಿ.ಪಿ–ಟಿಎಸ್‌ಪಿ/ಮುನಿರಾಬಾದ್/2016–17/3470 ದಿನಾಂಕ: 25.06.2016 ರ ಪತ್ರದಲ್ಲಿ ಕೆಲವು ಷರತ್ತುಬದ್ಧ ನಿಬಂಧನೆಗಳನ್ನು ವಿಧಿಸಿ ಎಂ.ಡಿ, ಕೆ.ಆರ್.ಐ.ಡಿ.ಎಲ್ ಬೆಂಗಳೂರು ಇವರಿಗೆ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸೂಚಿಸಿರುತ್ತಾರೆ. ಮುಂದುವರೆದು ಮಾನ್ಯ ಶಾಸಕರ ಮನವಿ ಪತ್ರ ದಿನಾಂಕ;18.08.2016 ರಲ್ಲಿ ವೀರಾಪುರದಿಂದ ಗೌರಸಮುದ್ರ ಮುಖಾಂತರ ಚಿಕ್ಕನಹಳ್ಳಿ ಎಸ್ ಸಿ ಕಾಲೋನಿಯವರೆಗೆ 5.00 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿಯು ಹೆಚ್ಚಿನ ಜನರಿಗೆ ಅನುಕೂಲವಾಗದ ಕಾರಣ ಗೌರಸಮುದ್ರ ಎಸ್.ಸಿ ಕಾಲೋನಿಯಿಂದ ಚಿಕ್ಕನಹಳ್ಳಿ ಎಸ್.ಸಿ ಕಾಲೋನಿಯವರಿಗೆ 5.00 ಕಿಮೀ ರಸ್ತೆ ಅಭಿವೃದ್ಧಿಯ **ಬದಲಿ ಕಾಮಗಾರಿಗೆ ಅನುಮೋದನೆ ಕೋರಿದ್ದು,** ಆದಕಾರಣ ವ್ಯವಸ್ಥಾಪಕ ನಿರ್ದೇಶಕರು ಕ.ನೀ.ನಿ.ನಿ ಬೆಂಗಳೂರು ರವರು ತಮ್ಮ ಪತ್ರ ಸಂಖ್ಯೆ:ಕ.ನೀ.ನಿ/ತಾಂತ್ರಿಕ/ಎಸ್.ಸಿ.ಪಿ& ಟಿಎಸ್‌ಪಿ/ಮುನಿರಾಬಾದ್/2016–17/4813 ದಿನಾಂಕ:24.08.2016 ರಲ್ಲಿ ಎಂ.ಡಿ, ಕೆ.ಆರ್.ಐ.ಡಿ.ಎಲ್ ಬೆಂಗಳೂರು ರವರಿಗೆ ಬರೆದ ಪತ್ರದಲ್ಲಿ ಬದಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸೂಚಿಸಿರುತ್ತಾರೆ. ಈ ಕಾಮಗಾರಿಯನ್ನು ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಚಿತ್ರದುರ್ಗ ರವರು ಅಂದಾಜು ಪಟ್ಟಿಯನ್ನು ತಾಂತ್ರಿಕವಾಗಿ ತಯಾರಿಸಿ ತಮ್ಮ ಪತ್ರ ಸಂಖ್ಯೆ: ಅ.ಅ/ಕೆ.ಆರ್.ಐ.ಡಿ.ಎಲ್/ಚಳ್ಳಕೆರೆ/ಕೆ.ಎನ್.ಎನ್.ಎಲ್/2016–17/861 ದಿನಾಂಕ:18.10.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿ ಮುಖ್ಯ ಇಂಜಿನೀಯರ್ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರ ಮೇಲ್ದಂಡೆ ಯೋಜನಾ ವಲಯ ಚಿತ್ರದುರ್ಗ ರವರಿಗೆ ಸಲ್ಲಿಸಿದ್ದು, ಸದರಿಯವರು ತಮ್ಮ ಪತ್ರ ಸಂ:ಮು.ಇಂ.ಚಿ/ಕ.ನೀ.ನಿ.ನಿ/ಭ.ಮೇ.ಯೋ.ವ/ತಾಂ.ಸ.1/ ತಾಂ.ಶಾ.6/2016–17/2869 ದಿನಾಂಕ:01.12.2016 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂಪೂರ್ಣ ಜವಾಬ್ದಾರಿ ಕೆ.ಆರ್.ಐ.ಡಿ.ಎಲ್ ರವರದ್ದಾಗಿರುತ್ತದೆ.

**ಈ ಹಿನ್ನೆಲೆಯಲ್ಲಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಮತ್ತೊಂದು ವಿಧಾನಸಭಾ**

**ಕ್ಷೇತ್ರದ ಶಾಸಕರ ಪತ್ರದ ಅನ್ವಯ ಮೇಲ್ಕಂಡಂತೆ ಬದಲಾವಣೆಮಾಡಲು ಅವಕಾಶವಿದೆಯೇ? ಎಂಬ ಸ್ಪಷ್ಟ ಹಾಗೂ ನಿಖರವಾದ ಮಾಹಿತಿಯನ್ನು ನಿಗಮ ಕಛೇರಿಯಲ್ಲಿ ಪಡೆಯಬಹುದಾಗಿದೆ ಎಂಬುದಾಗಿ ವರದಿಯಿಂದ ತಿಳಿದು ಬಂದಿರುತ್ತದೆ.**

<u>ವಿಚಾರಣಾಧಿಕಾರಿಯವರ ಅಭಿಪ್ರಾಯ:-</u> ಮೇಲ್ಕಂಡ ದೂರು ಅರ್ಜಿಯ ವಿಚಾರಣೆಯ ಬಗ್ಗೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ. ಗುಣ-ಭರವಸೆ ಉಪವಿಭಾಗ, ಚಿತ್ರದುರ್ಗ ರವರ ಪತ್ರ ಸಂಖ್ಯೆ: ಸಂ.ಸಕಾಇಂ/ಲೋಇ/ಗುಣಭವಿ/ಚಿತ್ರದುರ್ಗ/ಡಾ.ಪ/2017-18 1960 ದಿ:23.01.2018 ರಂತೆ,

ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿಡಬ್ಲ್ಯೂಡಿ ಮೊಳಕಾಲ್ಮೂರು ರವರು ತಮ್ಮ ಪತ್ರ ಸಂಖ್ಯೆ:ಸಂ;ಸಕಾಇಂ/ಲೋಇ/ಉ.ವಿ/ಮೊ/ವ/2017-18 ದಿನಾಂಕ:29.01.2018 ರಂತೆ,

ಕಂಪನಿ ಕಾರ್ಯದರ್ಶಿಗಳು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಬೆಂಗಳೂರು ರವರ ಪತ್ರ ಸಂ:ವಿಜೆಎನೆಲ್/ಎಎಲ್‌ಜಿ-18/2017-18/3111 ದಿನಾಂಕ:15.03.2018 ರಂತೆ,

ಮುಖ್ಯ ಇಂಜಿನೀಯರ್ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರ ಮೇಲ್ದಂಡೆ ಯೋಜನಾ ವಲಯ ಚಿತ್ರದುರ್ಗ ರವರು ತಮ್ಮ ಪತ್ರ ಸಂ:ಮು.ಇ.ಚಿ/ವಿ.ಜ.ನಿ.ನಿ/ಭ.ಮೇ.ಯೋ.ವ/ತಾ.ಸ.6/ತಾ.ಶಾ.6/2018-19/634 ದಿನಾಂಕ:21.06.2018 ರಂತೆ, ಹಾಗೂ ಸ್ಥಳ ಪರಿಶೀಲನೆಯಿಂದಾಗಿ....,

**"ಸದರಿ ರಸ್ತೆಯನ್ನು 4.313 ಕಿ.ಮೀ ಉದ್ದ ನಿರ್ಮೀಸಲಾಗಿದ್ದು, ನಿರ್ಮಾಣಗೊಂಡ ಡಾಂಬರ್ ರಸ್ತೆಯ ಕೆಲವು ಭಾಗದಲ್ಲಿ ಬೇಸ್ ಪದರ, ಇನ್ನೂ ಕೇಲವು ಭಾಗದಲ್ಲಿ ಸಬ್‌ಗ್ರೇಡ್ ಪದರ ಕುಸಿತಕ್ಕೊಳಗಾಗಿರುತ್ತದೆ.ಡಾಂಬರ್ ಪದರದ ಅಸಮರ್ಪಕ ಗಟ್ಟಿಣೆಯಿಂದಾಗಿ, ಮಳೆ ನೀರು ಬೇಸ್ ಪದರಕ್ಕೆ ಇಳಿದು ಬೇಸ್ ಪದರದ ಕುಸಿತಕ್ಕೆ ಕಾರಣವಾಗಿರುತ್ತದೆ. ಸಬ್ ಗ್ರೇಡ್ ಬಲವರ್ಧನೆಗಾಗಿ ಉಪಯೋಗಿಸಲಾದ ಗ್ರಾವೆಲ್ ಉಬ್ಬುವ ಗುಣ ಹೊಂದಿರುವುದು ಸಹ ರಸ್ತೆಯ ವಿಫಲತೆಗೆ ಪ್ರಮುಖ ಕಾರಣವಾಗಿರುತ್ತದೆ. ಅಂದಾಜಿನಲ್ಲಿ ಕನಿಷ್ಠ 0.9 ಮೀಟರ್ ಅಗಲದ ಭುಜಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಂಡಿದ್ದರೂ, ಬಹುತೇಕ ಕಡೆಗಳಲ್ಲಿ ಸದೃಡವಾದ ಭುಜಗಳ ನಿರ್ಮಾಣವಾಗಿರುವುದಿಲ್ಲ. ರಸ್ತೆಯ ವಿಫಲತೆಗೆ ಇದು ಒಂದು ಕಾರಣವಾಗಿರುತ್ತದೆ."**

ಹಾಗೂ ವಾಸ್ತವಿಕವಾಗಿ **ಸಬ್‌ಬೇಸಿಗೆ ಉಪಯೋಗಿಸಲಾದ ಗ್ರಾವೆಲ್ ಯೋಗ್ಯವಾಗಿರುವುದಿಲ್ಲ ಹಾಗೂ ಬಹುತೇಕ ಕಡೆ ಭುಜಗಳ ಬಲವರ್ಧನೆ ಮಾಡಿರುವುದಿಲ್ಲ. ಬೇಸ್ ಪದರಕ್ಕಾಗಿ ವೆಟ್‌ಮಿಕ್ಸ್ ಮೇಕ್ಯಾಡಂ ಬದಲು WATER Boumd Macadom ಅನ್ನು ಉಪಯೋಗಿಸಲಾಗಿದ್ದು, ಸದರಿ ಅಂದಾಜು ಪಟ್ಟಿಯಲ್ಲಿನ ಮೂರು ಪದರಗಳ ದಪ್ಪ 0.225 ಮೀ ಗಳ ಬದಲು 0.12 ನಿಂದ 0.15 ಮೀ ಗಳಿರುತ್ತದೆ. ಸದರಿ ಗ್ರೇಡ್-2 ಮತ್ತು ಗ್ರೇಡ್-3 ಗಳು ನಿಗದಿತ ಗ್ರಡೇಷನ್ ಹೊಂದಿರುವುದಿಲ್ಲ. ನಿಗದಿತ ಪ್ರಮಾಣದಲ್ಲಿ ಡಾಂಬರ್ ಮೇಲ್ಮೈ ಪದರವನ್ನು ಸಮರ್ಪಕವಾಗಿ ಗಟ್ಟಿಣೆಗೊಳಿಸದೇ ಇರುವುದು ಹಾಗೂ ಉಷ್ಣಾಂಶದ ಕೊರತೆಯು ಸಹ ರಸ್ತೆಯ ಬಹುತೇಕ ಕಡೆಗಳಲ್ಲಿ ಕಿತ್ತು ಹೋಗಲು ಕಾರಣವಾಗಿರುತ್ತದೆ** ಎಂಬುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಸದರಿ ಮೇಲ್ಕಂಡ ಕಾಮಗಾರಿಯು ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿರುತ್ತದೆ. ಆದರೆ ಸರ್ಕಾರದ ಆದೇಶ ಸಂ: ಜಸಂಇ 35 ವಿಬ್ಯಾಇ 2016, ಬೆಂಗಳೂರು ದಿನಾಂಕ: 20.08.2016 ರಲ್ಲಿ ಈ ಯೋಜನೆಯ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಕರ್ನಾಟಕ ನೀರಾವರಿ ನಿಗಮದಿಂದ ವರ್ಗಾಯಿಸಲಾಗಿರುತ್ತದೆ.

ಉಳಿದಂತೆ ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿರುವ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಮತ್ತೊಂದು ವಿಧಾನಸಭಾ ಕ್ಷೇತ್ರದ ಶಾಸಕರ ಪತ್ರದ ಅನ್ವಯ ಮೇಲ್ಕಂಡಂತೆ ಬದಲಾವಣೆಮಾಡಲು ಅವಕಾಶವಿದೆಯೇ? ಎಂಬ ಬಗ್ಗೆ ವಿಶ್ವೇಶ್ವರಯ್ಯ ಜಲ ನಿಗಮ ಬೆಂಗಳೂರು ರವರಲ್ಲಿ

| | |
|---|---|
| | ಮಾಹಿತಿಯನ್ನು ಕೋರಲಾಗಿ, ಮುಖ್ಯ ಇಂಜಿನೀಯರ್ ಭದ್ರಾ ಮೇಲ್ದಂಡೆ ಯೋಜನೆ ಚಿತ್ರದುರ್ಗ ರವರು ಈ ಹಿಂದೆ ಕರ್ನಾಟಕ ನೀರಾವರಿ ನಿಗಮದ ಅಡಿಯಲ್ಲಿ ಕಾರ್ಯನಿರ್ವಹಿಸಿದ್ದು, **ಈ ಕಾರಣದಿಂದಾಗಿ ಪ್ರಕರಣಕ್ಕೆ ಕುರಿತಂತೆ ಮುಖ್ಯ ಇಂಜಿನೀಯರ್ ಭ. ಮೇ. ಯೋ. ಚಿತ್ರದುರ್ಗ ಹಾಗೂ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ಮಾಹಿತಿಯನ್ನು ಪಡೆಯಲು ಕೋರಲಾಗಿದೆ** ಎಂಬುದಾಗಿ ತಮ್ಮ ವರದಿಯನ್ನು ತಿಳಿಸಿರುತ್ತಾರೆ.<br>ಅದರಂತೆ ಮುಖ್ಯ ಇಂಜಿನಿಯರ್ ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ರವರಲ್ಲಿ ಮಾಹಿತಿಯನ್ನು ಕೋರಲಾಗಿ, ಈ ಬಗ್ಗೆ ಸ್ಪಷ್ಟ ಹಾಗೂ ನಿಖರವಾದ ಮಾಹಿತಿಯನ್ನು ನಿಗಮ ಕಛೇರಿಯಲ್ಲಿ ಪಡೆಯಬಹುದಾಗಿದೆ ಎಂಬುದಾಗಿ ವರದಿಯನ್ನು ನೀಡಿರುತ್ತಾರೆ.<br>ಮೇಲ್ಕಂಡ ಎರಡೂ ಕಛೇರಿಗಳು ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿರುವ **ಒಂದು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಮತ್ತೊಂದು ವಿಧಾನಸಭಾ ಕ್ಷೇತ್ರದ ಶಾಸಕರ ಪತ್ರದ ಅನ್ವಯ ಮೇಲ್ಕಂಡಂತೆ ಬದಲಾವಣೆಮಾಡಲು ಅವಕಾಶವಿದೆಯೇ? ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಲು ಒಬ್ಬರು ಮತ್ತೊಬ್ಬರಿಂದ ಪಡೆಯಲು ಕೋರಿದ್ದು, ಇಬ್ಬರೂ ಸಹ ಸ್ಪಷ್ಟವಾದ ಮಾಹಿತಿಯನ್ನು ನೀಡಿರುವುದಿಲ್ಲ.**<br>ಸದರಿ ಕಾಮಗಾರಿಯು ಇನ್ನು ಪೂರ್ಣಗೊಂಡಿರುವುದಿಲ್ಲ. ಕಾಮಗಾರಿಯು ಇನ್ನೂ ಬಾಕಿ ಇದ್ದು, ಇದುವರೆಗೂ ನಿರ್ವಹಿಸಿರುವ **ಕಾಮಗಾರಿಯು ಅಂದಾಜು ಪಟ್ಟಿಯಲ್ಲಿ ಇರುವಂತೆ ನಿರ್ಮಾಣಗೊಂಡಿರುವುದಿಲ್ಲ. ಇದು ಕಳಪೆ ಗುಣಮಟ್ಟದಲ್ಲಿ ನಿರ್ಮಾಣಗೊಂಡಿರುವುದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ. ಗುಣ–ಭರವಸೆ ಉಪವಿಭಾಗ, ಚಿತ್ರದುರ್ಗ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿಡಬ್ಲ್ಯೂಡಿ ಮೊಳಕಾಲ್ಮೂರು ರವರುಗಳ ವರದಿಗಳಿಂದ** ಕಂಡು ಬಂದಿರುತ್ತದೆ.<br>ಒಟ್ಟಾರೆಯಾಗಿ **ಕೆ.ಆರ್.ಐ.ಡಿ.ಎಲ್ ಚಿತ್ರದುರ್ಗ ರವರು ಕಾಮಗಾರಿ ಅನುಷ್ಠಾನಗೊಳಿಸುವಲ್ಲಿ ಅಸಮರ್ಥತೆ ತೋರಿಸಿದ್ದರಿಂದಾಗಿ ರಸ್ತೆ ಕಾಮಗಾರಿಯು ಅಲ್ಲಲ್ಲಿ ಕಿತ್ತು ಹೋಗಲು ಕಾರಣವಾಗಿರುತ್ತದೆ** ಎಂಬುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂದು ವಿಚಾರಣಾಧಿಕಾರಿಯವರು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. |
| 6 | **ಎಸ್.ಪಿ ರವರ ಅಭಿಪ್ರಾಯ** |
| | ವಿಚಾರಣಾಧಿಕಾರಿಯವರಾದ ಶ್ರೀ.ಎನ್.ಎನ್.ಕೇಶವಮೂರ್ತಿ, ಪೊಲೀಸ್ ನಿರೀಕ್ಷಕರು, ಕ.ಲೋ., ಚಿತ್ರದುರ್ಗ ಇವರು ಅರ್ಜಿ ವಿಚಾರಣೆ ಸಂಬಂಧ ಕಾಮಗಾರಿ ನಡೆದ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ಕೈಗೊಂಡು, ನಂತರ ಸದರಿ ಡಾಂಬರೀಕರಣ ರಸ್ತೆಯ ಗುಣಮಟ್ಟ, ಬಾಳಿಕೆ, ತಗಲುವ ವೆಚ್ಚ ಹಾಗೂ ಎಸ್ಟಿಮೇಷನ್ ಕುರಿತಾಗಿ ಸಂಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸುವಂತೆ ಕೋರಿ ಎ.ಇ.ಇ., ಗುಣ & ಭರವಸೆ ಉಪ–ವಿಭಾಗ, ಚಿತ್ರದುರ್ಗ ಇವರಿಗೆ ಮತ್ತು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ ಇವರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್., ಗ್ರಾಮೀಣಾಭಿವೃದ್ಧಿ ಭವನ, 04ನೇ & 05 ನೇ ಮಹಡಿ, ಆನಂದರಾವ್ ವೃತ್ತ, ಗಾಂಧಿನಗರ, ಬೆಂಗಳೂರು ಇ.ಇ., ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಚಳ್ಳಕೆರೆ ಇವರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಕಛೇರಿಗಳಿಗೆ ಪತ್ರ ಬರೆದು ಸಂಬಂಧಿಸಿದ ಮಾಹಿತಿ ಹಾಗೂ ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸಿ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ ತಿಳಿದು ಬಂದ ಅಂಶಗಳೇನೆಂದರೆ,<br>**"ಸದರಿ ರಸ್ತೆಯನ್ನು 4.313 ಕಿ.ಮೀ ಉದ್ದ ನಿರ್ಮಿಸಲಾಗಿದ್ದು, ನಿರ್ಮಾಣಗೊಂಡ ಡಾಂಬರ್ ರಸ್ತೆಯ ಕೆಲವು ಭಾಗದಲ್ಲಿ ಬೇಸ್ ಪದರ, ಇನ್ನೂ ಕೇಲವು ಭಾಗದಲ್ಲಿ ಸಬ್‌ಗ್ರೇಡ್ ಪದರ ಕುಸಿತಕ್ಕೊಳಗಾಗಿರುತ್ತದೆ. ಡಾಂಬರ್ ಪದರದ ಅಸಮರ್ಪಕ ಗಟ್ಟಿಣೆಯಿಂದಾಗಿ, ಮಳೆ ನೀರು ಬೇಸ್ ಪದರಕ್ಕೆ ಇಳಿದು ಬೇಸ್ ಪದರದ** |

| | |
|---|---|
| | ಕುಸಿತಕ್ಕೆ ಕಾರಣವಾಗಿರುತ್ತದೆ. ಸಬ್ ಗ್ರೇಡ್ ಬಲವರ್ಧನೆಗಾಗಿ ಉಪಯೋಗಿಸಲಾದ ಗ್ರಾವೆಲ್ ಉಬ್ಬುವ ಗುಣ ಹೊಂದಿರುವುದು ಸಹ ರಸ್ತೆಯ ವಿಫಲತೆಗೆ ಪ್ರಮುಖ ಕಾರಣವಾಗಿರುತ್ತದೆ. ಅಂದಾಜಿನಲ್ಲಿ ಕನಿಷ್ಠ 0.9 ಮೀಟರ್ ಅಗಲದ ಭುಜಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಂಡಿದ್ದರೂ, ಬಹುತೇಕ ಕಡೆಗಳಲ್ಲಿ ಸದೃಡವಾದ ಭುಜಗಳ ನಿರ್ಮಾಣವಾಗಿರುವುದಿಲ್ಲ. ರಸ್ತೆಯ ವಿಫಲತೆಗೆ ಇದು ಒಂದು ಕಾರಣವಾಗಿರುತ್ತದೆ ಹಾಗೂ ಸಬ್‌ಬೇಸಿಗೆ ಉಪಯೋಗಿಸಲಾದ ಗ್ರಾವೆಲ್ ಯೋಗ್ಯವಾಗಿರುವುದಿಲ್ಲ ಹಾಗೂ ಬಹುತೇಕ ಕಡೆ ಭುಜಗಳ ಬಲವರ್ಧನೆ ಮಾಡಿರುವುದಿಲ್ಲ. ಬೇಸ್ ಪದರಕ್ಕಾಗಿ ವೆಟ್‌ಮಿಕ್ಸ್ ಮೇಕ್ಯಾಡಂ ಬದಲು **WATER Boumd Macadom** ಅನ್ನು ಉಪಯೋಗಿಸಲಾಗಿದ್ದು, ಸದರಿ ಅಂದಾಜು ಪಟ್ಟಿಯಲ್ಲಿನ ಮೂರು ಪದರಗಳ ದಪ್ಪ 0.225 ಮೀ ಗಳ ಬದಲು 0.12 ನಿಂದ 0.15 ಮೀ ಗಳಿರುತ್ತದೆ. ಸದರಿ ಗ್ರೇಡ್–2 ಮತ್ತು ಗ್ರೇಡ್–3 ಗಳು ನಿಗದಿತ ಗ್ರಡೇಷನ್ ಹೊಂದಿರುವುದಿಲ್ಲ. ನಿಗದಿತ ಪ್ರಮಾಣದಲ್ಲಿ ಡಾಂಬರ್ ಮೇಲ್ಮೈ ಪದರವನ್ನು ಸಮರ್ಪಕವಾಗಿ ಗಟ್ಟಿಗೊಳಿಸದೇ ಇರುವುದು ಹಾಗೂ ಉಷ್ಣಾಂಶದ ಕೊರತೆಯು ಸಹ ರಸ್ತೆಯ ಬಹುತೇಕ ಕಡೆಗಳಲ್ಲಿ ಕಿತ್ತು ಹೋಗಲು ಕಾರಣವಾಗಿರುತ್ತದೆ ಎಂಬುದು ವಿಚಾರಣಾಧಿಕಾರಿಯವರ ವರದಿ ಹಾಗೂ ಇತರೆ ಇಲಾಖೆಯವರು ನೀಡಿರುವ ವರದಿಯಿಂದ ತಿಳಿದು ಬಂದಿರುತ್ತದೆ.<br><br>ಸದರಿ ಮೇಲ್ಕಂಡ ಕಾಮಗಾರಿಯು ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿರುತ್ತದೆ. ಆದರೆ ಸರ್ಕಾರದ ಆದೇಶ ಸಂ: ಜಸಂಇ 35 ವಿಬ್ಯಾಇ 2016, ಬೆಂಗಳೂರು ದಿನಾಂಕ: 20.08.2016 ರಲ್ಲಿ ಈ ಯೋಜನೆಯು ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಕರ್ನಾಟಕ ನೀರಾವರಿ ನಿಗಮದಿಂದ ವರ್ಗಾಯಿಸಲಾಗಿರುತ್ತದೆ ಎಂಬ ವಿಷಯವು ವಿಚಾರಣಾಧಿಕಾರಿಯವರ ವರದಿಯಿಂದ ತಿಳಿದು ಬಂದಿರುತ್ತದೆ.<br><br>ಉಳಿದಂತೆ ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿರುವಂತೆ **ಒಂದು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಮತ್ತೊಂದು ವಿಧಾನಸಭಾ ಕ್ಷೇತ್ರದ ಶಾಸಕರ ಪತ್ರದ ಅನ್ವಯ ಮೇಲ್ಕಂಡಂತೆ ಬದಲಾವಣೆಮಾಡಲು ಅವಕಾಶವಿದೆಯೇ? ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಲು** ವಿಶ್ವೇಶ್ವರಯ್ಯ ಜಲ ನಿಗಮ ಬೆಂಗಳೂರು & ಮುಖ್ಯ ಇಂಜಿನಿಯರ್ ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ರವರ ಕಛೇರಿಗಳಿಗೆ ಪತ್ರ ಮುಖೇನ ಕೋರಿದ್ದರೂ **ಒಬ್ಬರು ಮತ್ತೊಬ್ಬರಿಂದ ಪಡೆಯಲು ಹೇಳುತ್ತಾ, ಎರಡು ಕಛೇರಿಗಳು ಸಹ ಸ್ಪಷ್ಟವಾದ ಮಾಹಿತಿಯನ್ನು ನೀಡಿರುವುದಿಲ್ಲ ಎಂಬ ವಿಷಯವು ವಿಚಾರಣಾಧಿಕಾರಿಯವರ ವರದಿಯಿಂದ ತಿಳಿದು ಬಂದಿರುತ್ತದೆ.**<br><br>ಒಟ್ಟಾರೆಯಾಗಿ ಸದರಿ ಕಾಮಗಾರಿಯು ಅಪೂರ್ಣವಾಗಿದ್ದು, ಕಾಮಗಾರಿ ಪೂರ್ಣಗೊಳ್ಳುವುದು ಇನ್ನೂ ಬಾಕಿ ಇದ್ದು, ಇದುವರೆಗೂ ನಿರ್ವಹಿಸಿರುವ **ಕಾಮಗಾರಿಯು ಅಂದಾಜು ಪಟ್ಟಿಯಲ್ಲಿ ಇರುವಂತೆ ನಿರ್ಮಾಣಗೊಂಡಿರುವುದಿಲ್ಲ. ಇದು ಕಳಪೆ ಗುಣಮಟ್ಟದಲ್ಲಿ ನಿರ್ಮಾಣಗೊಂಡಿದ್ದು, ಕೆ.ಆರ್.ಐ.ಡಿ.ಎಲ್ ಚಿತ್ರದುರ್ಗ ರವರು ಕಾಮಗಾರಿ ಅನುಷ್ಠಾನಗೊಳಿಸುವಲ್ಲಿ ಅಸಮರ್ಕತೆ ತೋರಿಸಿದ್ದರಿಂದಾಗಿ ರಸ್ತೆ ಕಾಮಗಾರಿಯು ಅಲ್ಲಲ್ಲಿ ಕಿತ್ತು ಹೋಗಲು ಕಾರಣವಾಗಿರುತ್ತದೆ** ಎಂಬ ಅಂಶವು ವಿಚಾರಣಾಧಿಕಾರಿಯವರ ಖುದ್ದು ಸ್ಥಳ ಪರಿಶೀಲನೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ. ಗುಣ–ಭರವಸೆ ಉಪವಿಭಾಗ, ಚಿತ್ರದುರ್ಗ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿಡಬ್ಲ್ಯೂಡಿ ಮೊಳಕಾಲ್ಮೂರು ರವರುಗಳ ಸಲ್ಲಿಸಿರುವ ವರದಿಗಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ.<br><br>ಆದ್ದರಿಂದ ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿವರವಾದ ವಿಚಾರಣಾ ವರದಿ & ಲಗತ್ತುಗಳನ್ನು ಇದರೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗಾಗಿ & ಮುಂದಿನ ಕ್ರಮಕ್ಕಾಗಿ ನಿವೇದಿಸಿಕೊಳ್ಳಲಾಗಿದೆ. |

5) In view of the report submitted by the Superintendent of Police, Karnataka Lokayukta, Chitradurga, as indicated by the Scrutiny Officer (ARE-6) in the scrutiny note dated 29.08.2018, I had directed the respondent no.4 and 5 to appear in person before me on 25.10.2018 with their explanation for not maintaining the quality in formation of the road in question. Accordingly, the respondent no.4 and 5 had appeared and submitted their explanation. It is useful to extract the relevant portion of the said explanation, which reads as hereunder;

""ಕಾರ್ಯಪಾಲಕ ಅಭಿಯಂತರರ ಕಛೇರಿ

**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ನಿಯಮಿತ**

(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)

**ಚಳ್ಳಕೆರೆ ವಿಭಾಗ**

**ದೇವರಾಜ ಅರಸು ಬಡಾವಣೆ, ಚಳ್ಳಕೆರೆ – 577522, ಚಿತ್ರದುರ್ಗ ಜಿಲ್ಲೆ.**

---

ಸಂ:ಕಾಅ/ಕೆಆರ್‌ಐಡಿಎಲ್/ಚಕೆ/ಕೆ.ಎನ್.ಎನ್.ಎಲ್/2018–19/ ದಿನಾಂಕ: 22–10–2018

ಇವರಿಗೆ:

**ಮಾನ್ಯ ಅಪರ ನಿಬಂಧಕರು ವಿಚಾರಣೆಗಳು–6,**
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಮಾನ್ಯರೇ,

ವಿಷಯ:–ಮೊಳಕಾಲ್ಮೂರು ತಾಲ್ಲೂಕು ಗೌರಸಮುದ್ರ ಗ್ರಾಮದ ಎಸ್.ಸಿ.ಕಾಲೋನಿಯಿಂದ ಚಿಕ್ಕೇನಹಳ್ಳಿ ಎಸ್.ಸಿ.ಕಾಲೋನಿಯವರೆಗೆ ರಸ್ತೆ

ಕಾಮಗಾರಿಯ ದೂರಿನ ವಿಚಾರದಲ್ಲಿ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- 1)ಸಂ:ಲೋಕ/ಸಿಟಿಸಿ/ಪಿಐ(1)/ದೂರು/25/2017-18 ದಿ:07.12.2017

2)ಸಂ:ಕಾಅ/ಕೆ.ಆರ್.ಐ.ಡಿ.ಎಲ್/ಚಕೆ/ಲೋಕಾಯುಕ್ತ/2017-18/965 ದಿ:19.12.2017

3)ಸಂ:ಕಂಪ್ಲೇಂಟ್/ಲೋಕ್/ಬಿಸಿ/3276/2017/ಎ.ಆರ್.ಇ.6, ದಿ:14.09.2018

* * * * * * *

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಗೌರಸಮುದ್ರ ಗ್ರಾಮದ ಎಸ್.ಸಿ.ಕಾಲೋನಿಯಿಂದ ಚಿಕ್ಕೇನಹಳ್ಳಿ ಎಸ್.ಸಿ.ಕಾಲೋನಿಯವರೆಗೆ ರಸ್ತೆ ಕಾಮಗಾರಿಯನ್ನುಕೆಆರ್ಐಡಿಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿದ್ದು, ಅತೀ ಹೆಚ್ಚಿನ ಮಳೆಯಿಂದ ಕೆಲವು ಭಾಗಗಳಲ್ಲಿ ರಸ್ತೆ ಹಾಳಾಗಿರುತ್ತದೆ. ಉಲ್ಲೇಖ(2)ರಲ್ಲಿ ಸದರಿ ಕಾಮಗಾರಿಯ ಬಗ್ಗೆ ವಿವರಗಳನ್ನು ಸಲ್ಲಿಸಿದ್ದು, ಹಾಳಾದ ರಸ್ತೆಯ ಭಾಗವನ್ನು ಹೊಸದಾಗಿ ನಿರ್ಮಾಣ ಮಾಡಿ ಹಸ್ತಾಂತರಿಸಿದ ನಂತರ ಒಂದು ವರ್ಷ ನಿರ್ವಹಣೆ ಮಾಡುವಂತೆ ಆಜ್ಞಾಪಿಸಬೇಕೆಂದು ಕೋರಿಕೊಳ್ಳಲಾಗಿತ್ತು.

ಮುಂದುವರೆದು, ಹಾಳಾದ ರಸ್ತೆಯನ್ನು ಪೂರ್ತಿ ತೆಗೆದು ಹೊಸದಾಗಿ Gravel, Embankment, Wet Mix Macadam, ಕಾಮಗಾರಿಯ **ಚೈನೇಜ್: 650ನಲ್ಲಿ 25ಮೀ, ಚೈನೇಜ್: 1975 ರಲ್ಲಿ 30ಮೀ ಚೈನೇಜ್: 2050 ರಲ್ಲಿ 110ಮೀ, ಚೈನೇಜ್: 3020 ರಲ್ಲಿ 30ಮೀ ಹಾಗೂ ಚೈನೇಜ್:3590 ರಲ್ಲಿ 85 ಮೀಟರ್** ರಸ್ತೆಯು ಹೊಸದಾಗಿ ನಿರ್ವಹಿಸಿ ಪೂರ್ಣಗೊಳಿಸಿದ್ದು, ಸದರಿ ಕಾಮಗಾರಿ ನಿರ್ವಹಿಸಿದStage wise photos ಗಳನ್ನು ಹಾಗೂ Test report ಗಳನ್ನು ತಮ್ಮ ನಮ್ರ ಅವಗಾಹನೆಗಾಗಿ ಅರ್ಪಿಸಿದೆ. ಜೂನ್-2018 ರಲ್ಲಿ Wet Mix Metling ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಮಳೆಗಾಲ ಆಗಿರುವುದರಿಂದ ಡಿಸೆಂಬರ್-2018 ರ ಅಂತ್ಯಕ್ಕೆ ಟಾರ್ ಕೆಲಸವನ್ನು ಪೂರ್ಣಗೊಳಿಸಿ, ಸಂಬಂಧ ಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಸ್ತಾಂತರಿಸಲಾಗುವುದು. ಸದರಿ ಕಾಮಗಾರಿಯು ಇನ್ನೂ ಪೂರ್ಣವಾಗದೇ ಇರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಹಸ್ತಾಂತರಿಸದ ನಂತರ 1 ವರ್ಷ

ನಿರ್ವಹಣೆ ಅವಧಿಯಲ್ಲಿ ನಿರ್ವಹಣೆಯನ್ನು ಮಾಡಲಾಗುವುದು ಎಂಬ ಅಂಶವನ್ನು ತಮ್ಮ ಆದ್ಯ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಆದುದರಿಂದ ದಯಾಳುಗಳು ಆದ ತಾವುಗಳು ನಮ್ಮ ಮನವಿಯನ್ನು ಪುರಸ್ಕರಿಸಿ ಕಾಮಗಾರಿ ಪೂರ್ಣಗೊಳಿಸಿ ಸಂಬಂಧಪಟ್ಟವರಿಗೆ ಹಸ್ತಾಂತರಿಸಿದ ನಂತರ ನಮ್ಮನ್ನು ಈ ಪ್ರಕರಣದಿಂದ ವಿಮುಕ್ತಿಗೊಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಗೌರವಪೂರ್ವಕವಾಗಿ ವಿನಂತಿಸಲಾಗಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**

**ಲಗತ್ತು:** 1.Stage wise photos
2.Text Reports

ಸಹಿ/-,
**ಕಾರ್ಯಪಾಲಕ ಅಭಿಯಂತರರು,**
**ಕೆ,ಆರ್.ಐ.ಡಿ.ಎಲ್, ಚಳ್ಳಕೆರೆ".**

6) As it can be seen from the explanation submitted by the respondent no.4 and 5 on account of the heavy rain, the road has been damaged and since the formation of road in question is within the maintenance period, the damaged road will be repaired. Subsequently, the respondent no.4 and 5 have attended to the defective work and rectified the defects. Accordingly, they submitted a further report dated 04.06.2019.

It is useful to extract the said report, which reads as hereunder;

"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿ:26-04-2019ರ ನೋಟೀಸ್‌ನ ಸಂಖ್ಯೆ/ಕಂಪ್ಲೇಂಟ್/ಲೋಕ್/ಬಿಡಿ/3276/2017/ಎಆರ್‌ಇ-6 ಇದರ ಪರಿವೀಕ್ಷಣಾ ಸಂಬಂಧಿಸಿದಂತೆ ವರದಿ/ಆಕ್ಷೇಪಣೆಯನ್ನು ದ್ವಿಪ್ರತಿಯಲ್ಲಿ ದಿ:07-06-2019 ರೊಳಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಸದರಿ ನೋಟೀಸ್‌ನೊಂದಿಗೆ ಲಗತ್ತಿಸಿರುವ ದಾಖಲಾತಿಯ ಪ್ರತಿಯಲ್ಲಿ ತನಿಖೆಯ ಹಿನ್ನೆಲೆ ಎಂದು ಟಿಪ್ಪಣಿ ಹಾಳೆಯ ಕಂಡಿಕೆ ಸಂ(81) ರಿಂದ ಆರಂಭವಾಗಿರುವ ಕಂಡಿಕೆ(110)ಕ್ಕೆ ಮುಕ್ತಾಯವಾಗಿರುತ್ತದೆ.

ಸದರಿ ಟಿಪ್ಪಣಿ ಹಾಳೆಯ ಕಂಡಿಗಳಲ್ಲಿನ ಮಾಹಿತಿಗಳ ಪ್ರಕಾರ ದೂರುದಾರರಾದ ಶ್ರೀ.ಹೆಚ್.ಟಿ.ನಾಗರೆಡ್ಡಿ ಬಿನ್ ಹೊಸಕೋಟೆ ತಿಮ್ಮಪ್ಪ, ಜೆ.ಬಿ.ಹಳ್ಳಿ ಪೋಸ್ಟ್ ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಲ್ಲೂಕಿನ ಗೌರಸಮುದ್ರ ಗ್ರಾಮದ ಎಸ್.ಸಿ.ಕಾಲೋನಿಯಿಂದ ಚಿಕ್ಕನಹಳ್ಳಿ ಗ್ರಾಮದ ಎಸ್.ಸಿ.ಕಾಲೋನಿಯವರೆಗೆ 2015-16ನೇ ಸಾಲಿನ ಎಸ್.ಸಿ.ಪಿ ಯೋಜನೆಯಡಿಯಲ್ಲಿ ರೂ.2.00 ಕೋಟಿಗಳ ಡಾಂಬರೀಕರಣ ರಸ್ತೆ ಅಭಿವೃದ್ಧಿ ಕಾಮಗಾರಿ ಕಳಪೆಯಾಗಿದೆ ಎಂದು ದಿ:14.11.2017 ರಂದು ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಿಸಿರುತ್ತಾರೆ. ಗೌರವಾನ್ವಿತ ಲೋಕಾಯುಕ್ತರ ಆದೇಶದಂತೆ ಮುಖ್ಯ ಇಂಜಿನಿಯರ್‌ರವರು ಕಾರ್ಯಪಾಲಕ ಅಭಿಯಂತರರು-3 ಇವರಿಗೆ ತನಿಖೆ ನಡೆಸಿ ತನಿಖಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು-3 ಇವರು ದಿ:05.03.2019 ರಂದು ಸ್ಥಳ ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ಸದರಿತನಿಖಾ ಸಮಯದಲ್ಲಿ ನಾನು ಹಾಜರಿರುತ್ತೇನೆ.

ಕಾರ್ಯಪಾಲಕ ಅಭಿಯಂತರರು-3 ರವರು ಸ್ಥಳ ತನಿಖೆಯಲ್ಲಿ ರಸ್ತೆ ಕಾಮಗಾರಿ (ಆರೋಪಿತ) ಅಳತೆಗಳನ್ನು ಪರಿಶೀಲಿಸಲಾಯಿತು. 0+000 ಚೈನೇಜ್‌ನಿಂದ ರಸ್ತೆಯ ಅಂತ್ಯದವರೆಗೆ ಅಳತೆಗಳನ್ನು ಆಸ್ಫಾಲ್ಟ್ ಭಾಗದಲ್ಲಿ ಹಾಗೂ ಸಿ.ಸಿ.ರಸ್ತೆಯಲ್ಲಿ ಪ್ರತಿ 30 ಮೀ.ಗೆ ಅಗಲಗಳನ್ನು ಸಹ ಪರಿಶೀಲಿಸಲಾಯಿತು ಹಾಗೂ ರಸ್ತೆಯ ಒಟ್ಟು ಉದ್ದವನ್ನು ಅಳೆಯಲಾಯಿತು. ಅಳತೆಗಳು ಅಳತೆ ಪುಸ್ತಕದಲ್ಲಿ ದಾಖಲಿಸಲಾದ ಅಳತೆಗಳ ಪ್ರಕಾರವೇ ಇರುವುದನ್ನು ಗಮನಿಸಲಾಯಿತು ಎಂದು ನಮೂದಿಸಿರುತ್ತಾರೆ.

ತನಿಖಾಧಿಕಾರಿಯವರು ಕಂಡಿಕೆ ಹಾಳೆ(95)ರಲ್ಲಿ "ರಸ್ತೆಯ ಮೇಲ್ಭಾಗವು ತೃಪ್ತಿಕರವಾಗಿದ್ದು, ಯಾವುದೇ ಭಾಗದಲ್ಲಿ Pot Hole ಅಥವಾ ಇನ್ನಿತರೇ ದೋಷಗಳಾಗಲೀ ಕಂಡು ಬಂದಿರುವುದಿಲ್ಲ. ಸಿ.ಸಿ.ರಸ್ತೆಯ ಭಾಗಗಳಲ್ಲಿಯೂ ಸಹ ರಸ್ತೆಯು ತೃಪ್ತಿಕರವಾಗಿರುವುದನ್ನು ಗಮನಿಸಲಾಗಿದೆ" ಎಂದು ತಿಳಿಸಿರುತ್ತಾರೆ.

ಕಂಡಿಕೆ(96)ರಲ್ಲಿ "ಅಲ್ಲದೇ ರಸ್ತೆಯು ಕೆಲವು ಕಡೆ ಈ ಹಿಂದೆ Core Sampleಗಾಗಿ Core ತೆರೆಯಲಾದ ಸ್ಥಳದಲ್ಲಿಯೂ ಸಿ.ಸಿ.ರಸ್ತೆಯ ದಪ್ಪವನ್ನು ಮತ್ತು ರಸ್ತೆಯ ತುದಿಗಳಲ್ಲಿಯೂ (side) ಸಿ.ಸಿ.ರಸ್ತೆ ದಪ್ಪವನ್ನು ಪರಿಶೀಲಿಸಲಾಗಿ ದಾಖಲಿಸಲಾದ (15 cm) ಅಳತೆಯ ಪ್ರಕಾರವೇ ಇರುವುದನ್ನು ಗಮನಿಸಲಾಯಿತು. ರಸ್ತೆಯ ಎಲ್ಲಾ ಐಟಂಗಳನ್ನು ಅನುಮೋದಿತ ಅಂದಾಜು ಪಟ್ಟಿಯಲ್ಲಿನ

specificationsಗಳ ಅನ್ವಯ ಹಾಗೂ ದಾಖಲಿಸಲಾದ ಅಳತೆಗಳ ಪ್ರಕಾರವೇ ನಿರ್ವಹಿಸಿರುವುದನ್ನು ಗಮನಿಸಲಾಗಿದೆ. ರಸ್ತೆಯ ಆರಂಭಿಕ ಭಾಗದಲ್ಲಿ (intial chainageಗಳಲ್ಲಿ) ಮಾತ್ರ ರಸ್ತೆಯ ಭುಜಗಳಲ್ಲಿ (shoulders) ಕೆಲವು ದೋಷಗಳನ್ನು ಗಮನಿಸಲಾಗಿದ್ದು, ರಸ್ತೆಯು ಈಗಾಗಲೇ ಎರಡು ಮಳೆಗಾಲವನ್ನು ಎದುರಿಸಿದ್ದು, ಸಣ್ಣ ಕೊರತೆಗಳಿಂದಾಗಿ ಉಂಟಾಗಿರುವ ದೋಷಗಳಾಗಿರುತ್ತವೆ. ಅವುಗಳನ್ನು ವಾರ್ಷಿಕ ನಿರ್ವಹಣೆಯಲ್ಲಿ ಸರಿಪಡಿಸಬಹುದಾದ ಅಂಶಗಳಾಗಿರುತ್ತವೆ. ಈ ಹಿಂದೆ ಮಳೆಗಾಲದಲ್ಲಿ ರಸ್ತೆಯ ಕೆಲವು ಭಾಗಗಳಲ್ಲಿ ಆದ ದೋಷಗಳನ್ನು ಸರಿಪಡಿಸಲಾಗಿರುತ್ತದೆ ಎಂದು ತನಿಖೆ ವೇಳೆ ಸಂಬಂಧಪಟ್ಟ ಅಭಿಯಂತರರುಗಳು ತಿಳಿಸಿದರು" ಎಂದು ನಮೂದಿಸಿರುತ್ತಾರೆ.

ಕಂಡಿಕೆ97(5) "ಸ್ಥಳ ತನಿಖೆಯ ಅನ್ವಯ ಕಾಮಗಾರಿಯನ್ನು ಅಂದಾಜು ಪಟ್ಟಿಯ ಅನ್ವಯ ಹಾಗೂ ದಾಖಲಿಸಲಾದ ಅಳತೆಗಳನ್ವಯ ನಿರ್ವಹಿಸಿರುವುದು ಕಂಡುಬರುತ್ತದೆ. ಕಾಮಗಾರಿ ಗುಣಮಟ್ಟಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ಕಾಂಕ್ರೀಟ್ ರಿಬೌಂಡ್ ಹ್ಯಾಮರ್ ಟೆಸ್ಟ್ ಮೂಲಕ ಪರಿಶೀಲಿಸಿ ಕಾಮಗಾರಿಗೆ ಅಗತ್ಯವಾದ Compressive strength ಹೊಂದಿರುವುದನ್ನು ಖಾತರಿ ಪಡಿಸಿಕೊಳ್ಳಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತವು ರೂ.2.00 ಕೋಟಿಗಳಾಗಿದ್ದು, ಅಂದಾಜು ಪಟ್ಟಿ ಮೊತ್ತಕ್ಕಿಂತ ಮ್ಹಿರದಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ" ಎಂದು ನಮೂದಿಸಿರುತ್ತಾರೆ.

ಕಂಡಿಕೆ–97(6) "ಎದುರುದಾರರು ತಿಳಿಸಿರುವಂತೆ ಸುಮಾರು 325 ಮೀಟರ್‌ಗಳ ರಸ್ತೆಯು ವಿವಿಧ ಚೈನೇಜ್ ಗಳಲ್ಲಿ ಹಾಳಾಗಿದ್ದು,

ಅದನ್ನು ಹೊಸದಾಗಿ ನಿರ್ಮಿಸಿ ಪೂರ್ಣಗೊಳಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಹಲವು ಚೈನೇಜ್‌ಗಳಲ್ಲಿ ರಸ್ತೆಯನ್ನು ಮರು ನಿರ್ಮಾಣ ಮಾಡಿದ್ದು ಮರು ನಿರ್ಮಾಣ ಮಾಡುವ ವೇಳೆಯಲ್ಲಿ ತೆಗೆಯಲಾದ ಛಾಯಚಿತ್ರಗಳನ್ನು ಹಾಗೂ ಮರುನಿರ್ಮಾಣ ಮಾಡಿದ ಅವಧಿಯಲ್ಲಿ ಮಾಡಿದಂತಹ ಪರೀಕ್ಷಾ ವರದಿಗಳನ್ನು ಸಹ ಸಲ್ಲಿಸಿರುತ್ತಾರೆ" ಎಂದು ನಮೂದಿಸಿರುತ್ತಾರೆ.

ಕಂಡಿಕೆ–97(7) "ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು ಇವರು ತಮ್ಮ ದಿ:01.12.2018 ರ ಪತ್ರದಲ್ಲಿ ರಸ್ತೆಯನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದ ನಂತರದಲ್ಲಿ ಒಂದು ವರ್ಷದ ಅವಧಿಗೆ ನಿರ್ವಹಣೆ ಜವಾಬ್ದಾರಿಯನ್ನು ಸಹ ಹೊಂದಿರಲಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು" ನಮೂದಿಸಿರುತ್ತಾರೆ.

ಕಂಡಿಕೆ–97(8)ರಲ್ಲಿ "ಅಲ್ಲದೇ ಸಹಾಯಕ ಕಾರ್ಯಪಾಲಕ ಅಭಿಯಂತರರು, ಚಳ್ಳಕೆರೆ, ಇವರು ದಿ: 10.01.2019 ರ ಪತ್ರದಲ್ಲಿ ಸದರಿ ಕಾಮಗಾರಿಯು ಪೂರ್ಣಗೊಂಡ ದಿ:12.11.2018 ರಿಂದ ಒಂದು ವರ್ಷದ ಅವಧಿಗೆ ಕೆ.ಆರ್.ಐ.ಡಿ.ಎಲ್, ಸಂಸ್ಥೆಯ ವತಿಯಿಂದ ನಿರ್ವಹಣೆ ಮಾಡಲಾಗುವುದು ಎಂದು ಸಹ ವರದಿಯನ್ನು ಸಲ್ಲಿಸಿರುತ್ತಾರೆ (ಕೆ.ಆರ್.ಐ.ಡಿ.ಎಲ್, ಸಂಸ್ಥೆ ಸ್ವತ ಕಾಮಗಾರಿಯನ್ನು ನಿರ್ವಹಿಸುತ್ತದೆ)" ಎಂದು ನಮೂದಿಸಿರುತ್ತಾರೆ.

ಸ್ವತ: ತನಿಖಾಧಿಕಾರಿಗಳೇ ಖುದ್ದು ಕಾಮಗಾರಿಯ ಸ್ಥಳ ಪರಿವೀಕ್ಷಣೆಯನ್ನು ಕೈಗೊಂಡು ಮೇಲ್ಕಂಡ ಅಂಶಗಳನ್ನು ತಮ್ಮ ತನಿಖಾ ವರದಿಯಲ್ಲ್ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಕಾಮಗಾರಿಯನ್ನು ತೃಪ್ತಿಕರವಾಗಿ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಐಟಂಗಳ

ಪ್ರಕಾರವೇ ನಮೂದಿಸಿರುವುದು ತನಿಖಾಧಿಕಾರಿಗಳ ವರದಿಯಲ್ಲಿ ಕಂಡು ಬರುತ್ತದೆ.

ಚಿತ್ರದುರ್ಗ ಲೋಕಾಯುಕ್ತ ಅಧೀಕ್ಷಕರು ನೀಡಿರುವ ವರದಿಯ ಆಧಾರದ ಮೇಲೆ ಹಣ ದುರುಪಯೋಗ ಎಂಬ ಅಂಶವು ತನಿಖೆಯಿಂದ ಸ್ಪಷ್ಟಪಡಿಸಲು ಸಾಧ್ಯವಾಗುವುದಿಲ್ಲ ಎಂದು ಅಂಶವನ್ನು ಸಹ ನಮೂದಿಸಿರುತ್ತಾರೆ.

ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರದಲ್ಲಿ ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ ಮತ್ತು ದೇವಸಮುದ್ರ ಹೋಬಳಿಗಳಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ 2017ರಲ್ಲಿ ವಾಡಿಕೆಗಿಂತ ಹೆಚ್ಚುವರಿಯಾಗಿ ಅಂದರೆ 254 ಎಂ.ಎಂ ಮತ್ತು 147 ಎಂ.ಎಂ. ಅಧಿಕ ಮಳೆ ಬಿದ್ದ ಕಾರಣ ರಸ್ತೆಯ ಕೆಲವು ಭಾಗದಲ್ಲಿ ಚೌಗು ಪ್ರದೇಶ ಇದ್ದ ಕಾರಣದಿಂದ ಸುಮಾರು 325 ಮೀಟರ್‌ನಷ್ಟು ಡಾಂಬರ್ ರಸ್ತೆ ಕಿತ್ತು ಹೋಗಿದ್ದು, ಅಧಿಕ ಮಳೆಯಾಗಿರುವುದಕ್ಕೆ ಸಂಬಂಧಿಸಿದಂತೆ ಮೊಳಕಾಲ್ಮೂರು ರವರಿಂದ ಪಡೆದಂತಹ ಮಳೆ ಮಾಪನ ವರದಿ ಇದ್ದು ಅದನ್ನು ಸಹ ಸಲ್ಲಿಸಿದೆ.

ಕಾಮಗಾರಿಯು ಉತ್ತಮ ಗುಣಮಟ್ಟದಿಂದ ಕೂಡಿದ್ದು ಹಾಗೂ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಪ್ರಸ್ತುತ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸುತಿದ್ದು, ತನಿಖಾಧಿಕಾರಿಗಳು ಕಂಡಿಕೆ-98(2)ರಲ್ಲಿ "ಅಂದಾಜು ಪಟ್ಟಿಯಲ್ಲಿ ಹಲವು ತಾಂತ್ರಿಕ ನ್ಯೂನತೆಗಳಿರುತ್ತವೆ" ಹಾಗೂ ಕಂಡಿಕೆ-100(1)ರಲ್ಲಿ "ಆದಕಾರಣ ತಾಂತ್ರಿಕ ನ್ಯೂನತೆಗಳು ಅಂದಾಜು ಪಟ್ಟಿಯಲ್ಲಿ ಕಂಡುಬರುತ್ತವೆ" (ಉದಾಹರಣೆಗೆ: ಪ್ರಮಾಣಗಳು Specificationಗಳು, limpsum provision made

items) ತನಿಖಾಧೀಕಾರಿಗಳೇ ಯಾವುದೇ ಲೋಕದೋಷಗಳು ಕಾಮಗಾರಿಯಲ್ಲಿ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ತಾಂತ್ರಿಕ ನ್ಯೂನತೆಗಳು ಅಂದಾಜು ಪಟ್ಟಿಯಲ್ಲಿ ಕಂಡುಬರುತ್ತವೆ ಎಂದು ತಿಳಿಸಿರುತ್ತಾರೆ, ಈ ರೀತಿಯ ದ್ವಂದ್ವ ನಿಲುವನ್ನು ತನಿಖಾಧಿಕಾರಿಯವರು ಕೈಗೊಂಡಿರುತ್ತಾರೆ. ಅಂದಾಜು ಪಟ್ಟಿಯಲ್ಲಿ ಯಾವ ರೀತಿಯ ತಾಂತ್ರಿಕ ನ್ಯೂನತೆಗಳು Specificationಗಳು, lumpsum provision made items ಎಂದು ತಿಳಿಸಿದ್ದು, ಆದರೆ ಯಾವ ಯಾವ ಹಂತದಲ್ಲಿ ಯಾವ ಯಾವ ತಾಂತ್ರಿಕ ನ್ಯೂನತೆಗಳು ಆಗಿರುತ್ತವೆ? ನ್ಯೂನತೆಗಳನ್ನು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ? ಆ ನ್ಯೂನತೆಗಳಗೆ ಜವಾಬ್ದಾರಿಯುತ ಅಧಿಕಾರಿಗಳು ಯಾರು? ಎಂಬುದರ ಕುರಿತು ಯಾವುದೇ ಸಮಜಾಯಿಷಿಯನ್ನು ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ ನಮೂದಿಸಿರುವುದಿಲ್ಲ. ಬದಲಗೆ ತಾಂತ್ರಿಕ ನ್ಯೂನತೆಗಳು ಎಂದು ನಮೂದಿಸಿ ಪ್ರಶ್ನೆಗೆ ಉತ್ತರವಿಲ್ಲದೇ ಪ್ರಶ್ನೆಯನ್ನು ಪ್ರಶ್ನೆಯಾಗೇ ಉಳಿಸಿಕೊಂಡು ಹೋಗಿರುತ್ತಾರೆ. ತನಿಖಾಧಿಕಾರಿಯವರು ಒಂದು ವೇಳೆ ತಾಂತ್ರಿಕ ನ್ಯೂನತೆಗಳು ಇದಿದ್ದರೆ ಯಾವ ಕಾರಣಕ್ಕಾಗಿ ನಮೂದಿಸಿರುವುದಿಲ್ಲ ಎಂಭುದನ್ನು ಸ್ಪಷ್ಟಪಡಿಸಿಬೇಕಾಗಿರುತ್ತದೆ. ತನಿಖಾಧಿಕಾರಿಗಳು ಯಾವುದೇ ನ್ಯೂನತೆಗಳು ದೊರೆಯದ ಕಾರಣ ಹಾಗೂ ತಾಂತ್ರಿಕ ನ್ಯೂನತೆಗಳಿಗೆ ಯಾವೂದೇ ಪೂರಕ ದಾಖಲೆ/ನಿರ್ದಿಷ್ಟ ದಾಖಲೆ ಹಾಜರುಪಡಿಸದೇ ವಿನಾ: ಕಾರಣ ಸುಳ್ಳು ಮಾಹಿತಿಯನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ನಮೂದಿಸಿರುವ ತಾಂತ್ರಿಕ ನ್ಯೂನತೆಗಳನ್ನು ಬಹಿರಂಗಪಡಿಸಬೇಕಾಗಿದ್ದು ಯಾವೂದೇ ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ಅಂದಾಜು ಪಟ್ಟಿಯಲ್ಲಿ ಯಾವುದೇ ರೀತಿಯ ತಾಂತ್ರಿಕ ನ್ಯೂನತೆಗಳು ಇಲ್ಲದಿರುವುದು ಸ್ಪಷ್ಟವಾಗಿರುತ್ತದೆ, ಆದ್ದರಿಂದ ತನಿಖಾಧಿಕಾರಿಯವರು ತಾಂತ್ರಿಕ ನ್ಯೂನತೆ ಬಗ್ಗೆ ನಿರ್ದಿಷ್ಟ

ದಾಖಲೆ ಹಾಜರುಪಡಿಸದೇ ಇರುವುದಿರಿಂದ ಸದರಿ ತಾಂತ್ರಿಕ ನ್ಯೂನತೆಗಳು ಸುಳ್ಳೆಂದು ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಆದ್ದರಿಂದ ಸದರಿ ಕಾಮಗಾರಿಯಲ್ಲಿ ನನ್ನದು ಯಾವುದೇ ತಪ್ಪಿಲ್ಲವಾದ್ದರಿಂದ ನನ್ನ ವರದಿ/ಆಕ್ಷೇಪಣೆಯನ್ನು ಮಾನ್ಯರು ಪರಿಗಣಿಸಿ ಈ ಹಂತದಲ್ಲೇ ನನ್ನ ವಿರುದ್ಧದ ಆಪಾದನೆಗಳನ್ನು ಮುಕ್ತಾಯಗೊಳಿಸಲು ವಿನಂತಿಸಿಕೊಳ್ಳುತ್ತೇನೆ".

7) The report of the Superintendent of Police, Karnataka Lokayukta, Chitradurga and the Investigation Officer who has conducted the investigation and other materials on record including the explanation submitted by the Respondents No.4 & 5, prima-facie establishes that the road formation was of inferior quality and on account of that, the road formed has been damaged. At this stage, I find it difficult to accept the explanation of Respondents No.4 and 5, that the road has been damaged on account of heavy rains. There is no material placed to show that the rain poured during that season was of such a gravity, which was the cause for damaging the road. Further, it is needless to point out that the road was required to be formed in terms of the prescribed quality and if it was done, I am prima-facie inclined to think that the road would not have been damaged even if there was heavy rain within a period of 3

to 4 months. The further explanation of Respondents No.4 and 5 that it was within the maintenance/defect liability period and therefore the defects have been rectified is totally unacceptable. The KRIDL is an instrumentality of the State and it is not open for the KRIDL and its officers to say that, since the work executed is within the maintenance/defect liability period, no prejudice is caused. The defect liability period compels the KRIDL to re-do the work so far as the rights of the members of the public are concerned to make the road suitable for use or road worthy. That does not mean that the work executed can be of inferior quality which calls for re-doing the work, causing financial loss to the KRIDL which is an instrumentality of the State. The concerned officers who are in charge of getting the work executed are responsible for causing the financial loss on account of repeating the work over and again as has been done in this case. Therefore, at this stage, I am not satisfied with the defence taken by the Respondents No.4 and 5 that the road was damaged on account of heavy rain and the work executed was within the maintenance/defect liability period and as such they have not

committed any misconduct. As observed by me earlier, this requires a detailed enquiry. Further, so far as the financial loss to KRIDL and the State is concerned, it is the matter to be considered in the course of detailed enquiry. Therefore, prima-facie the materials on record establishes that there is misconduct on the part of Respondents No.4 and 5 within the meaning of Rule 3(1)(i) to (iii) of KCS (Conduct) Rules, 1966, which calls for an enquiry. Since, they will have to face an enquiry, I am of the view that it is not desirable to make further comments at this stage as it may prejudice the defence of Respondents No.4 & 5 in the course of enquiry.

8) The 7th respondent in the complaint is an MLA of Ballari Rural Constituency, Gandhinagar Main Road, Ballari District. The substantial grievance against him is that, at his instance the work in question was taken up. There is no material placed on record to show that in any manner he was responsible for execution of defective work in question. In the execution of work in question, the 7th respondent is not directly involved. Under these circumstances, since there was no material placed before me to show that the 7th respondent has committed any

mal-administration, the complaint against him was ordered to be closed by means of my order dated 13.3.2019.

9) The 2nd respondent in this complaint is the Managing Director of KRIDL. In normal course, it is needless to point out that, it is the duty of the Managing Director and other Senior Officers to supervise the work of their subordinates and to see that the quality in execution of the work is maintained by their subordinates. In this case, as observed by me earlier, the work executed by Respondents No.4 and 5 is defective in nature. However, in the absence of substantial material placed before me to show the connivance on the part of the 2nd respondent and Respondents No.1 & 3 for defective execution of the work, the complaint against them is required to be closed.

10) In the light of the discussion made above, a report under Section 12(3) of the Karnataka Lokayukta Act, is required to be made against the respondents No.4 & 5 only for initiating disciplinary proceedings.

11) Further, I am of the view, it is appropriate to bring to the notice of the State Government/Competent Authority, the way

in which KRIDL has been functioned. The experience has shown that the institution like KRIDL was established with an avowed object to concentrate labour intensive infrastructure works which are vital for development by providing employment opportunities to rural unemployed and under employed so as to improve their economic conditions; to undertake all rural development construction works directly by eliminating middlemen, i.e., contractors; to avoid exploitation of the rural poor, thereby passing on the full worth of money to the people. The Vision Statement of KRIDL as seen from its website appears to be the best and most efficient public sector company in Karnataka and to be leader in construction management quality & economical deliverables overall superior service. However, prima-facie it appears to me that the persons in-charge of the essential works assigned to KRIDL should go a long way in making this statement a reality.

12) Presently there are around 48 complaints pending investigation in this institution and though several recommendations under the provisions of Karnataka Lokayukta Act have been sent, yet it is seen that action taken reports on

those recommendations are awaited in 9 matters. These aspects are mentioned not to conclude that all the complaints are substantiated, but to highlight the fact that the institution of KRIDL is not functioning the way it was foreseen or expected to be working in the public interest. The allegations in some of the complaints pertain to misappropriation of public funds thereby highlighting the need for bringing transparency and accountability which is apparently lacking in the functioning of KRIDL. Therefore, I am of the view that it is desirable for the State Government to constitute a High Power Committee to consider the following –

(a) The functioning of the KRIDL in relation to the manner of execution of several works in the State of Karnataka and the quality of the work executed and fixing up the liability, if any, on the concerned Engineers or Officers of KRIDL.

(b) To prescribe norms for utilization of the funds by the officers of KRIDL which is granted towards execution of the works and the liability and accountability on the part of the Managing Director, KRIDL and other Senior officers of KRIDL in addition to the officers/Engineers who

are active in the execution of the works allotted to it.

(c) To revoke the exemption granted under Section 4(g) of Karnataka Transparency in Public Procurements Act - 1999, having regard to the unsatisfactory functioning, keeping in mind the findings of the report to be submitted by the High Power Committee and to take such other suitable and appropriate decisions in bringing more transparency, objectivity and accountability in the functioning of the KRIDL and the work to be executed by it.

It is desirable that the Committee is constituted at the earliest and report is secured without further loss of time.

13) In the light of what is stated above, in exercise of the power conferred on me under Section 12(3) of the Karnataka Lokayukta Act, I proceed to make the following recommendation as under –

(a) A recommendation is made to the Competent Authority to initiate Disciplinary Proceedings against Respondents No.4 & 5

and to entrust the same to this authority as per Rule 14-A of Karnataka Civil Services (Classification, Control and Appeal) Rules, 1957.

(b) A recommendation is made to the Government to constitute a High Power Committee as indicated in para No.12 above.

14) Further, as per Sec. 12(4) of Karnataka Lokayukta Act, 1984, the Competent Authority is required to **intimate this Authority within three months** from the date of receipt of this report, **about the action taken** or proposed to be taken on this report against the said officials.

Connected records are enclosed.

14/5/2020

(Justice P. Vishwanatha Shetty)
Lokayukta, State of Karnataka,
Bengaluru.

*vl